# ಚಾರು ಮಜುಂದಾರ್ ಮತ್ತು ಭಾರತದ ಕಮ್ಯುನಿಸ್ಟ್ ಚಳವಳಿಯ ಭವ್ಯ ಪರಂಪರೆ

ಕಾಮ್ರೇಡ್ ಚಾರು ಮಜುಂದಾರ್ ರವರು ಕೋಲ್ಕತ್ತಾದ ಲಾಲ್‌ಬಜಾರ್ ಪೊಲೀಸ್ ಠಾಣೆಯ ಲಾಕ್‌ಅಪ್‌ನಲ್ಲಿ ಸಾವನ್ನಪ್ಪಿ ಜುಲೈ 28, 2022ಕ್ಕೆ ಐವತ್ತು ವರ್ಷಗಳು ಕಳೆದಿವೆ. ಆಗ, ನಕ್ಸಲ್ಬಾರಿಯ ಹಿನ್ನೆಲೆಯಲ್ಲಿ ಭಾರತದಾದ್ಯಂತ ಹರಡಿದ ಕ್ರಾಂತಿಕಾರಿ ಅಲೆಯು ಚಾರು ಮಜುಂದಾರ್ ರವರ ಸಾವಿನೊಂದಿಗೆ ಅಂತ್ಯಗೊಳ್ಳುತ್ತದೆ ಎಂಬ ನಿರೀಕ್ಷೆಯನ್ನಿಟ್ಟುಕೊಂಡಿದ್ದ ಭಾರತದ ಪ್ರಭುತ್ವವು ದೊಡ್ಡ ನೆಮ್ಮದಿಯ ನಿಟ್ಟುಸಿರು ಬಿಟ್ಟಿರಬೇಕು. ಆದರೆ ಐದು ದಶಕಗಳ ನಂತರ, ಮೋದಿ ಆಡಳಿತವು ಪ್ರತಿ ಭಿನ್ನಾಭಿಪ್ರಾಯದ ಧ್ವನಿಯನ್ನು ಹತ್ತಿಕ್ಕಲು, ಭಿನ್ನಾಭಿಪ್ರಾಯ ಹೊಂದಿರುವವರಿಗೆ 'ನಗರ ನಕ್ಸಲ್' ಎಂಬ ಪದ ಬಳಕೆ ಮಾಡಿ, ಅವರನ್ನು ಹಿಂಸಿಸುವಂತಾಗಿದೆ. ನಕ್ಸಲ್ಬರಿ ಮತ್ತು ಚಾರು ಮಜುಂದಾರ್‌ರವರ ಸಿದ್ಧಾಂತಗಳು, ಅವರ ಸಾವಿನ ಐದು ದಶಕಗಳ ನಂತರವೂ ಭಾರತದ ಆಡಳಿತಗಾರರನ್ನು ಕಾಡುತ್ತಲೇ ಇವೆ.

ಮೇ 1967 ರಲ್ಲಿ ನಕ್ಸಲ್ಬಾರಿಯಲ್ಲಿ ರೈತರ ಬಂಡಾಯ ಭುಗಿಲೆದ್ದಾಗ, ಚೀನಾದ ಕಮ್ಯುನಿಸ್ಟ್ ಪಕ್ಷವು ಅದನ್ನು 'ಭಾರತದ ನೆಲದ ಮೇಲೆ ಅಪ್ಪಳಿಸುವ ವಸಂತಕಾಲದ ಗುಡುಗಿನ ಮುತ್ತು' ಎಂದು ಸ್ವಾಗತಿಸಿತು. ನಕ್ಸಲ್ಬಾರಿ ಚಳುವಳಿಯಿಂದ ಉದಯಿಸಿದ ಕೃಷಿ ಕ್ರಾಂತಿಯ ಹಾದಿಯು ಚೀನಾದ ಕ್ರಾಂತಿಯಿಂದ ಗಣನೀಯವಾಗಿ ಸ್ಫೂರ್ತಿ ಪಡೆದಿದೆ. ಚಾರು ಮಜುಂದಾರ್, ನಕ್ಸಲ್ಬರಿ ಮತ್ತು ಎರಡು ವರ್ಷಗಳ ನಂತರ ಸ್ಥಾಪಿತವಾದ ಸಿಪಿಐ(ಎಂಎಲ್) ಪಕ್ಷವು ಚೀನಾ, ಚೀನಾ ಕ್ರಾಂತಿ ಮತ್ತು ಮಾವೋ ಝೆಡಾಂಗ್ ನೇತೃತ್ವದ ಚೀನಾದ ಕಮ್ಯುನಿಸ್ಟ್ ಪಕ್ಷದೊಂದಿಗೆ ಗುರುತಿಸಿಕೊಂಡಿತು. ಆದರೆ ನಾನಾ ವಿಧಗಳಲ್ಲಿ ನಕ್ಸಲ್ಬರಿ ಮತ್ತು ಸಿಪಿಐ(ಎಂಎಲ್)ಪಕ್ಷವು ಕಮ್ಯುನಿಸ್ಟ್ ಚಳುವಳಿಯನ್ನು ಭಾರತದ ಸಾಮಾಜಿಕ ಮತ್ತು ಐತಿಹಾಸಿಕ ವಿಷಯಗಳತ್ತ ಆಳವಾಗಿ ಕೊಂಡೊಯ್ದವು. ನಕ್ಸಲ್ಬರಿಯು ಮಾರ್ಕ್ಸ್‌ವಾದದ ಭಾರತೀಕರಣ, ಮಾರ್ಕ್ಸ್‌ವಾದದ ಸಾರ್ವತ್ರಿಕ ಕ್ರಾಂತಿಕಾರಿ ತತ್ವಗಳನ್ನು ಭಾರತದ ನಿರ್ದಿಷ್ಟ ಪರಿಸ್ಥಿತಿಗಳು ಮತ್ತು ಸನ್ನಿವೇಶಕ್ಕೆ ಅನ್ವಯಿಸುವ ಕಡೆಗೆ ಒಂದು ದೊಡ್ಡ ಹೆಜ್ಜೆಯಾಗಿದೆ.

ನಕ್ಸಲ್ಬರಿ ಚಳುವಳಿ ರಾತ್ರೋರಾತ್ರಿ ನಡೆದದ್ದಲ್ಲ. ಇದು ಭಾರತದ ರೈತ ಹೋರಾಟ ಮತ್ತು ಕಮ್ಯುನಿಸ್ಟ್ ಚಳುವಳಿಯ ಇತಿಹಾಸದಲ್ಲಿ ಆಳವಾದ ಬೇರುಗಳನ್ನು ಹೊಂದಿತ್ತು. ಚಾರು ಮಜುಂದಾರ್ ಅವರು ಅವಿಭಜಿತ ಬಂಗಾಳದ ಶ್ರಮಿಕ ರೈತರ ಭೂಮಿ ಮತ್ತು ಬೆಳೆ ಹಕ್ಕುಗಳ ಸುತ್ತ ಕೇಂದ್ರೀಕರಿಸಿಲಾಗಿದ್ದ ಐತಿಹಾಸಿಕ ತೆಭಾಗ ಚಳವಳಿಯ ಪ್ರಮುಖ ಸಂಘಟಕರಲ್ಲಿ ಒಬ್ಬರಾಗಿದ್ದರು ಮತ್ತು ಆ ಕಾಲದ ಅನೇಕ ಕಮ್ಯುನಿಸ್ಟ್ ನಾಯಕರ ಜೊತೆಗೆ 1948 ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಿದಾಗ ಅವರು ಕೂಡ ಜೈಲು ಪಾಲಾದರು. ಜೈಲಿನಿಂದ ಹೊರಬಂದ ನಂತರ, ಉತ್ತರ ಬಂಗಾಳದ ಡಾರ್ಜಿಲಿಂಗ್ ಮತ್ತು ಜಲ್ಪೈಗುರಿ ಜಿಲ್ಲೆಗಳಲ್ಲಿ ತೆಭಾಗಾ ಚಳುವಳಿಯನ್ನು ಮುನ್ನಡೆಸಲು ಅವರು ಹಿಂತಿರುಗಿದರು. ತೆಭಾಗಾ ಚಳುವಳಿ ಪ್ರಾರಂಭವಾದ ದಿನಗಳಿಂದಲೂ ಕ್ರಾಂತಿಕಾರಿ ರೈತ ಚಳವಳಿಯೊಂದಿಗಿನ ಆಳವಾದ ಒಡನಾಟವೇ ಚಾರು ಮಜುಂದಾರ್‌ಗೆ ನಕ್ಸಲ್‌ಬಾರಿಯಲ್ಲಿ ರೈತರ ದಂಗೆಯನ್ನು ರೂಪಿಸಲು ಮತ್ತು ಅದನ್ನು ವಿಶಾಲವಾದ ಕೃಷಿ ಕ್ರಾಂತಿಯತ್ತ ಕೊಂಡೊಯ್ಯಲು ಮಾರ್ಗದರ್ಶನ ನೀಡಿತು.

ಭಾರತದ ಕಮ್ಯುನಿಸ್ಟ್ ಚಳುವಳಿಯ ಪ್ರಾರಂಭದ ಅನೇಕ ಕಮ್ಯುನಿಸ್ಟ್ ನಾಯಕರು ಶ್ರೀಮಂತ ಹಿನ್ನೆಲೆಯಿಂದ ಬಂದವರು ಮತ್ತು ವಿದೇಶದಲ್ಲಿ ಅಧ್ಯಯನ ಮಾಡುವಾಗ ಕಮ್ಯುನಿಸ್ಟ್ ಸಿದ್ಧಾಂತವನ್ನು ಒಪ್ಪಿಕೊಂಡವರಾಗಿದ್ದರು. ಚಾರು ಮಜುಂದಾರ್ ಅವರು ವಿಭಿನ್ನ ಸಂಪ್ರದಾಯದಲ್ಲಿ ಶಿಕ್ಷಣ ಪಡೆದವರಾಗಿದ್ದಾರೆ – ಅವರು ಅವಿಭಜಿತ ಬಂಗಾಳದಲ್ಲಿ ಸ್ವಾತಂತ್ರ್ಯ ಚಳುವಳಿಯ ಕಮ್ಯುನಿಸ್ಟ್ ಭಾಗವಾಗಿ ಸೇರಿದರು ಮತ್ತು ರೈತರನ್ನು ಸಂಘಟಿಸಲು ತಮ್ಮನ್ನು ತೊಡಗಿಸಿಕೊಂಡರು. ನಕ್ಸಲ್ಬಾರಿಯ ರೈತ ದಂಗೆಯು ವಿದ್ಯಾರ್ಥಿಗಳಲ್ಲಿ ಕ್ರಾಂತಿಕಾರಿ ಜಾಗೃತಿಯ ಒಂದು ದೊಡ್ಡ ಅಲೆಯನ್ನು ಹುಟ್ಟುಹಾಕಿದಾಗ, ಚಾರು ಮಜುಂದಾರ್ ಅವರು ಹಳ್ಳಿಗಳಿಗೆ ಹೋಗಿ ಭೂರಹಿತ ಬಡವರೊಂದಿಗೆ ಕೈಜೋಡಿಸಲು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಭಾರತದ ಶ್ರಮಜೀವಿಗಳು ಮತ್ತು ತುಳಿತಕ್ಕೊಳಗಾದ ಜನರ ಪರ ನಿಲ್ಲುವಂತೆ ಭಗತ್ ಸಿಂಗ್ ರವರು ಸಹ ಯುವಕರಿಗೆ ಕರೆ ನೀಡಿದ್ದರು.

ನಕ್ಸಲ್ಬರಿಯ ಹಿನ್ನೆಲೆಯಲ್ಲಿ, ಭಾರತದಾದ್ಯಂತ ಕಮ್ಯುನಿಸ್ಟ್ ಕ್ರಾಂತಿಕಾರಿಗಳು ಅಖಿಲ ಭಾರತ ಮಟ್ಟದಲ್ಲಿ ಸಂಘಟಿತರಾಗಲು ಮತ್ತು ಹೊಸ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಲು ಪ್ರೇರಣೆಯನ್ನು ಪಡೆದುಕೊಂಡರು. ಈ ಹೊಸ ಪಕ್ಷವನ್ನು ಪ್ರಾರಂಭಿಸುವಾಗ, ಚಾರು ಮಜುಂದಾರ್ ಅದರ ಕ್ರಾಂತಿಕಾರಿ ಪರಂಪರೆಯ ಬಗ್ಗೆ ಒತ್ತಿಹೇಳಿದರು. ಅವರು ಹೊಸ ಪಕ್ಷವನ್ನು ಭಾರತೀಯ ಕಮ್ಯುನಿಸ್ಟ್ ಚಳುವಳಿಯ ಕ್ರಾಂತಿಕಾರಿ ಭಾಗವಾಗಿ, ಅದು ಕೇರಳದ ಕಯ್ಯೂರ್ ಮತ್ತು ಪುನ್ನಪ್ರ–ವಯಲಾರ್ ದಂಗೆಗಳು, ಆಂಧ್ರದ ಮಹಾನ್ ತೆಲಂಗಾಣ ಚಳುವಳಿ ಮತ್ತು ಅವಿಭಜಿತ ಬಂಗಾಳದ ಐತಿಹಾಸಿಕ ತೇಭಾಗ ಚಳುವಳಿಯ ಪರಂಪರೆಯನ್ನು ಮುಂದಕ್ಕೆ ಕೊಂಡೊಯ್ಯುತ್ತದೆ ಎಂಬ ದಿಕ್ಕಿನಲ್ಲಿ ನೋಡಿದರು. ನಕ್ಸಲ್ಬರಿ ಮತ್ತು ಸಿಪಿಐ(ಎಂಎಲ್) ಸಹ ವಿದೇಶಿ ಆಳ್ವಿಕೆಯಿಂದ ಸ್ವಾತಂತ್ರ್ಯಕ್ಕಾಗಿ ಅಸ್ಪಷ್ಟವಾದ ಪ್ರಚೋದನೆಯೊಂದಿಗೆ ಸ್ಫೂರ್ತಿಗೊಂಡ ಆದಿವಾಸಿ ದಂಗೆಗಳ ಇತಿಹಾಸವನ್ನು ಮುನ್ನೆಲೆಗೆ ತರುವ ಮೂಲಕ ಭಾರತದ ವಸಾಹತುಶಾಹಿ–ವಿರೋಧಿ ಚಳುವಳಿಯ ಹೊಸ ಮತ್ತು ಆಳವಾದ ಅಧ್ಯಾಯನಕ್ಕೆ ಪ್ರೇರೇಪಿಸಿತು.

ನಕ್ಸಲ್ಬರಿ ಚಳುವಳಿಯು ಭುಗಿಲೆದ್ದಿದ್ದಾಗ ಮತ್ತು ಅದರ ತಕ್ಷಣದ ನಂತರ, ಚಾರು ಮಜುಂದಾರ್ ಮತ್ತು ನಕ್ಸಲ್ಬಾರಿ–ಪ್ರೇರಿತ ಕ್ರಾಂತಿಕಾರಿ ಕಮ್ಯುನಿಸ್ಟ್ ಚಳುವಳಿಯ ಸಂಸ್ಥಾಪಕರು ರೈತ ಗೆರಿಲ್ಲಾ ಯುದ್ಧದ ಪ್ರಗತಿಯ ಮೇಲೆ ಹೆಚ್ಚಾಗಿ ಗಮನಹರಿಸುತ್ತಾರೆ. ಪರಿಣಾಮವಾಗಿ, ಚುನಾವಣೆಗಳನ್ನು ಬಹಿಷ್ಕರಿಸಲಾಯಿತು, ಸಾಮೂಹಿಕ ಸಂಘಟನೆಯ ಹೋರಾಟಗಳು ಮತ್ತು ಆರ್ಥಿಕ ಹೋರಾಟಗಳು ಸ್ಥಗಿತಗೊಂಡವು. ಈ ಕ್ರಮವು ಸಾಧರಣವಲ್ಲದ ತುರ್ತು ಪರಿಸ್ಥಿತಿಗೆ ನಿರ್ಧಿಷ್ಠ ಪ್ರತಿಕಿಯೆಯಾಗಿದೇ ವಿನಃ ಎಲ್ಲಾ ಸಮಯದಲ್ಲೂ ತಂತ್ರವಾಗಲು ಸಾಧ್ಯವಿಲ್ಲವೆಂದು ಚಾರುಮಜುಮ್‌ದಾರ ರವರಿಗೆ ಅನಿಸಿತ್ತು. ನಕ್ಸಲ್ಬಾರಿಗೆ ಮೊದಲು, ಚಾರು ಮಜುಂದಾರ್ ಅವರು ಸಾಮೂಹಿಕ ಸಂಘಟನೆಗಳು ಮತ್ತು ಸಾಮೂಹಿಕ ಹೋರಾಟಗಳ ಅಗತ್ಯವನ್ನು ಎಂದಿಗೂ ತಿರಸ್ಕರಿಸಲಿಲ್ಲ ಮತ್ತು ಅವರೇ ಸಿಲಿಗುರಿಯಿಂದ ಸಿಪಿಐ(ಎಂ) ಅಭ್ಯರ್ಥಿಯಾಗಿ ವಿಧಾನಸಭಾ ಉಪಚುನಾವಣೆಯಲ್ಲಿ ಸ್ಪರ್ಧಿಸಿದ್ದರು.

1971ರ ಯುದ್ಧದಲ್ಲಿ ಭಾರತವು ಜಯಗಳಿಸಿದ ನಂತರ ಮತ್ತು ಗರೀಬಿ ಹಟಾವೋ ಘೋಷಣೆ ಮತ್ತು ಬ್ಯಾಂಕ್ ರಾಷ್ಟೀಕರಣ ಮತ್ತು ರಾಜರ ಸ್ವಂತ ವೆಚ್ಚಕ್ಕಾಗಿ ಸರ್ಕಾರದ ಬೊಕ್ಕಸದಿಂದ ಹಣ ನೀಡುವ ಪದ್ಧತಿಯನ್ನು ರದ್ದು ಮಾಡಿದಂತಹ ಕ್ರಮಗಳಿಂದ ಉಂಟಾದ ಜನಬೆಂಬಲದ ನಂತರ ಇಂದಿರಾ ಗಾಂಧಿಯವರು ತಮ್ಮ ಸ್ಥಾನವನ್ನು ಬಲಪಡಿಸುವುದರೊಂದಿಗೆ ಭಾರತೀಯ ಪ್ರಭುತ್ವವು ನಡೆಸಿದ ತೀವ್ರವಾದ ಮಿಲಿಟರಿ ದಮನ ಮತ್ತು ರಾಜಕೀಯ ಪರಿಸ್ಥಿತಿಯಲ್ಲಿ ಉಂಟಾದ ನಾಟಕೀಯ

ಬದಲಾವಣೆಯ ಸಂದರ್ಭದಲ್ಲಿ, ಚಾರು ಮಜುಂದಾರ್ ತಮ್ಮ ಕೊನೆಯ ಬರಹಗಳಲ್ಲಿ ಹಿನ್ನಡೆಯನ್ನು ಜಯಿಸುವ ಅಗತ್ಯವನ್ನು ಒತ್ತಿ ಹೇಳಿದರು. ಜನಸಾಮಾನ್ಯರೊಂದಿಗೆ ನಿಕಟ ಸಂಪರ್ಕವನ್ನು ಬೆಸೆಯುವ ಮೂಲಕ ಪಕ್ಷವನ್ನು ಜೀವಂತವಾಗಿರಿಸುವುದು, ಪಕ್ಷದ ಪರಮೋಚ್ಚ ಹಿತದೃಷ್ಟಿಯಿಂದ ಜನರ ಹಿತಾಸಕ್ತಿಗಳನ್ನು ಎತ್ತಿಹಿಡಿಯುವುದು ಮತ್ತು ಕೇಂದ್ರದ ಇಂದಿರಾ ಸರ್ಕಾರ ದ ನಿರಂಕುಶಾಧಿಕಾರದ ದಾಳಿ ಮತ್ತು ಪಶ್ಚಿಮ ಬಂಗಾಳದ ಎಸ್‌ಎಸ್ ರೇ ಆಡಳಿತದ ವಿರುದ್ಧ ವ್ಯಾಪಕ ಮಟ್ಟದಲ್ಲಿ ಎಡ ಮತ್ತು ಇತರೆ ಹೋರಾಟದ ಶಕ್ತಿಗಳೊಂದಿಗೆ ಏಕತೆಯನ್ನು ಬಯಸುವುದು ಎಂಬ ಮಾತುಗಳು, ಚಾರು ಮಜುಂದಾರ್ ತನ್ನ ಒಡನಾಡಿಗಳಿಗೆ ಹೇಳಿದ ಕೊನೆಯ ಮಾತುಗಳಾಗಿದ್ದವು.

ಇದು ಚಾರು ಮಜುಂದಾರ್ ಅವರ ಕೊನೆಯ ಕರೆಯಾಗಿದ್ದು, ಹೋರಾಟದ ರಂಗದಲ್ಲಿ ಕ್ರಾಂತಿಕಾರಿ ಕಮ್ಯುನಿಸ್ಟರನ್ನು ಮರುಸಂಘಟಿಸಲು ಪ್ರೇರೇಪಿಸಿತು. ಬಿಹಾರದಲ್ಲಿ ತುಳಿತಕ್ಕೊಳಗಾದ ಗ್ರಾಮೀಣ ಬಡವರ ಅಪರಿಮಿತ ಶಕ್ತಿ, ಅವರಲ್ಲಿದ್ದ ಸ್ಫೂರ್ತಿ ಮತ್ತು ಧೈರ್ಯದಿಂದಾಗಿ ಕಾಮ್ರೇಡ್ ಚಾರು ಮಜುಂದಾರ್ ಅವರ ಎರಡನೇ ಹುತಾತ್ಮ ವಾರ್ಷಿಕೋತ್ಸವದಂದು ಪಕ್ಷದ ಕೇಂದ್ರ ಸಮಿತಿಯನ್ನು ಮರು ರಚಿಸಲಾಯಿತು. ನಕ್ಸಲ್ಬಾರಿ ದಂಗೆಯಿಂದ ಮತ್ತು ಕಾಮ್ರೇಡ್ ಚಾರು ಮಜುಂದಾರ್ ಅವರ ರಾಜಕೀಯ ಪಯಣದಿಂದ ಪಡೆದ ಸ್ಫೂರ್ತಿ ಮತ್ತು ಕಲಿತ ಪಾಠಗಳು ಪುನರ್ ರಚಿಸಲ್ಪಟ್ಟ ಸಿಪಿಐ(ಎಂಎಲ್) ಕೇವಲ ತುರ್ತು ಪರಿಸ್ಥಿತಿಯ ದಮನ ವಿರುದ್ಧ ನಿಲ್ಲುವುದು ಮಾತ್ರವಲ್ಲದೆ ಪಕ್ಷದ ದೃಢವಾದ ಪುನರುಜ್ಜೀವನ ಮತ್ತು ವಿಸ್ತರಣೆಯನ್ನು ಮುನ್ನಡೆಸುವುದರೊಂದಿಗೆ, ಪ್ರಜಾಪ್ರಭುತ್ವಾತ್ಮಕ ಮಾರ್ಗದಲ್ಲಿ ಹೋರಾಟಗಳನ್ನು ನಡೆಸಿದ್ದನ್ನು ಹೊರಚೆಲ್ಲುತ್ತದೆ.

ಇಂದು ಆಧುನಿಕ ಭಾರತವು ತನ್ನ ಅತ್ಯಂತ ಕೆಟ್ಟ ರಾಜಕೀಯ ಸಂಕಷ್ಟವನ್ನು ಎದುರಿಸುತ್ತಿರುವಾಗ, ಚಾರು ಮಜುಂದಾರ್ ರವರಿಂದ ಸ್ಫೂರ್ತಿ, ಅವರ ದೃಷ್ಟಿಕೋನ ಮತ್ತು ಜ್ಞಾನವನ್ನು ಇಂದಿನ ಫ್ಯಾಸಿಸ್ಟ್ ವಿರೋಧಿ ಚಳುವಳಿಯು ಪಡೆದುಕೊಂಡಿದೆ. ತುರ್ತು ಪರಿಸ್ಥಿತಿಗೆ ಸಂಬಂಧಿಸಿದ ಪ್ರಜಾಪ್ರಭುತ್ವದ ಅಮಾನತು ಮತ್ತು ನಿಗ್ರಹವು ಇಂದು ಎಷ್ಟು ವ್ಯಾಪಕವಾಗಿದೆ ಮತ್ತು ಶಾಶ್ವತವಾಗಿದೆ ಎಂದರೆ ತುರ್ತು ಪರಿಸ್ಥಿತಿಯ ಔಪಚಾರಿಕ ಘೋಷಣೆಯು ಅನಗತ್ಯವಾಗಿದೆ. ಪ್ರಬಲ ಮಾಧ್ಯಮದ ಪಾತ್ರವು ಎಷ್ಟು ಸಂಪೂರ್ಣವಾಗಿ ಮತ್ತು ನಾಟಕೀಯವಾಗಿ ರೂಪಾಂತರಗೊಂಡಿದೆ ಎಂದರೆ ಮಾಧ್ಯಮ ಸೆನ್ಸಾರ್ಶಿಪ್ ಕೂಡ ಅನಗತ್ಯವಾಗಿದೆ. ಕಾರ್ಯಾಂಗವು ಇಂದು ಗಣರಾಜ್ಯದ ಉಳಿದ ಮೂರು ಅಂಗಗಳಾದ ನ್ಯಾಯಾಂಗ, ಶಾಸಕಾಂಗ ಮತ್ತು ಮಾಧ್ಯಮಗಳಿಗೆ ನಿರ್ದೇಶನ ಮತ್ತು ಆದೇಶವನ್ನು ನೀಡುತ್ತಿದೆ ಹಾಗೂ ಕೇಂದ್ರದ ಕಾರ್ಯಾಂಗದಲ್ಲಿ ಅಧಿಕಾರದ ಕೇಂದ್ರೀಕರಣಗೊಳ್ಳುತ್ತಿರುವುದು, ನಮ್ಮಲ್ಲಿರುವ ಒಕ್ಕೂಟ ವ್ಯವಸ್ಥೆಯಲ್ಲಿನ ಸಮತೋಲನವನ್ನು ಸಂಪೂರ್ಣವಾಗಿ ಹಾಳುಮಾಡಿದೆ.

ಈ ರೀತಿಯ ನಿಯಂತ್ರಣವಿಲ್ಲದ ಅಧಿಕಾರದ ಕೇಂದ್ರೀಕರಣವು ಹಿಂದೆಂದೂ ಕಂಡಿರದಂತಹ ಕೋಮು ಧ್ರುವೀಕರಣದ ತೀವ್ರತೆಗೆ ಹಾಗೂ ದ್ವೇಷ ಮತ್ತು ಸುಳ್ಳುಗಳನ್ನು ಹರಡಲು ದಾರಿಮಾಡಿಕೊಡುತ್ತದೆ. ಭಾರತವು ದೇಶಗಳಾಗಿ ವಿಭಜನೆ ಹೊಂದುವಂತಹ ಸಂಧಿಗ್ಧ ಕಾಲದಲ್ಲೂ ಸಹ ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ರಚನೆಯು ಅಂತಹ ದೊಡ್ಡಮಟ್ಟದ ಆಕ್ರಮಣವನ್ನೇನು ಎದುರಿಸಲಿಲ್ಲ. ಈ ಕೆಟ್ಟ ಫ್ಯಾಸಿಸ್ಟ್ ಆಕ್ರಮಣದೊಂದಿಗೆ ಕಾರ್ಪೊರೇಟ್ ಸಂಸ್ಥೆಗಳು ದೇಶದ ಅಮೂಲ್ಯವಾದ ನೈಸರ್ಗಿಕ, ಮೂಲಸೌಕರ್ಯ ಮತ್ತು ಮಾನವ ಅಭಿವೃದ್ಧಿ ಸಂಪನ್ಮೂಲಗಳನ್ನು ಲೂಟಿ ಮಾಡುತ್ತಿದೆ. ಭಾರತದ ಸಾಧನೆಗಳಿಗೆ ಮತ್ತು ಸುಧೀರ್ಘವಾದ ಸ್ವತಂತ್ರದ ಹೋರಾಟದ ಮೂಲಕ ಭಾರತೀಯ ಜನರು

ಸಾಧಿಸಿದ ಹಕ್ಕುಗಳಿಗೆ ಮತ್ತು ಭಾರತವು 75 ವರ್ಷಗಳಿಂದ ಸಾಂವಿಧಾನಿಕ ಗಣರಾಜ್ಯವಾಗಿ ಅಸ್ತಿತ್ವದಲ್ಲಿರುವುದಕ್ಕೆ ಈಗ ದಕ್ಕೆ ಉಂಟಾಗುತ್ತಿದೆ. ಕಾಮ್ರೇಡ್ ಚಾರು ಮಜುಂದಾರ್ ಅವರಿಂದ ಕಲಿಯುತ್ತಾ, ಮತ್ತೊಮ್ಮೆ ನಾವು ನಮ್ಮ ಸಂಗ್ರಹವಾದ ಐತಿಹಾಸಿಕ ಸಂಪನ್ಮೂಲಗಳನ್ನು ಆಳವಾಗಿ ಅಧ್ಯಾಯನ ಮಾಡುತ್ತಾ ಫ್ಯಾಸಿಸ್ಟ್ ವಿನ್ಯಾಸವನ್ನು ವಿಫಲಗೊಳಿಸಲು ಮತ್ತು ಪ್ರಜಾಸತ್ತಾತ್ಮಕ ಪುನರುತ್ಥಾನದ ಹೊಸ ಯುಗವನ್ನು ಪ್ರಾರಂಭಿಸಲು ಜನರಲ್ಲಿ ಕ್ರಾಂತಿಯ ಮನೋಭಾವನ್ನು ಬೆಳೆಸುವುದರೊಂದಿಗೆ ಕ್ರಾಂತಿಕಾರಿ ಕಾರ್ಯಕ್ರಮಗಳನ್ನು ನಡೆಸಬೇಕಾಗಿದೆ.

[ಸಂಪಾದಕೀಯ, ಎಂಎಲ್ ಅಪ್‌ಡೇಟ್, 26 ಜುಲೈ – 1 ಆಗಸ್ಟ್ 2022]